ಅಷ್ಟೇ ಬದುಕು ಅಂತ ತಿಳಿದಿದ್ದಾಳೆ. ಅವಳಿಗೆ ನಾನೂ ಅಷ್ಟೇ, ಇನ್ನೊಬ್ಬನೂ ಅಷ್ಟೇ... ಶಿ ಈಸ್ ಎ ಬಿಚ್...' ಸಂಜೀವನ ದನಿಯಲ್ಲಿ ತಿರಸ್ಕಾರ ತುಂಬಿತ್ತು.

ಅವಳಿಗೆ ತೀರ ಬೇಜಾರೆನಿಸಿ ಅಲ್ಲಿಂದಲೇ ಹಿಂತಿರುಗಿ ಧರಿತ್ರಿಯ ಫ್ಲಾಟಿಗೆ ಹೋಗಿದ್ದಳು. ಅವಳ ಪಾರ್ಟನರ್ ಒಬ್ಬನೇ ಇದ್ದ. ಧರಿತ್ರಿ ಊರಿಗೆ ಹೋಗಿದ್ದಾಳೆ. 'ನಮ್ಮದೇನು ಲಗ್ನವೇ... ಬಾ ಊಟಿಗೆ ಹೋಗೋಣ' ಅಂದ! ಯಾವುದೂ ಬೇಡವೆನ್ನಿಸಿ ರಜೆ ಹಾಕಿ ಶರಣಜ್ಜಿಯ ಊರಿಗೆ ಹೋಗಿದ್ದ ಕಾತ್ಯಾಯನಿಗೆ, 'ಹುಷಾರಿಲ್ಲ ಮಗಾ' ಅಂದಿದ್ದಳು ಅಜ್ಜಿ. ತಲೆ ಸಿಡಿತ ರಜೆ ಹಾಕಿ ಬಂದಿದೀನಿ ಅಂದವಳು ನಾಲ್ಕಾರು ದಿನ ಅಲ್ಲಿದ್ದಳು.

ವಾಪಸ್ ಬಂದವಳೇ ಬೇರೊಂದು ಫ್ಲಾಟನ್ನು ಲೀಜಿಗೆ ಹಾಕಿಕೊಂಡು ಸಂಜೀವನಿಗೊಂದು ಮಾತೂ ಹೇಳದೆ ತನ್ನ ಸಾಮಾನೆಲ್ಲ ಸಾಗಿಸಿದಳು. ತನಗ್ಯಾರೂ ಇಲ್ಲ. ತಾನು ಅನಾಥೆ. ತನಗೂ ಅಪ್ಪ, ಒಡಹುಟ್ಟಿದವರು ಎಲ್ಲ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಅಂತ ಕಣ್ಣೀರು ಹಾಕಿದಳು. ಅಮ್ಮ ತನ್ನ ಪಾಲಿಗೆ ಇದ್ದೂ ಇಲ್ಲದಂತೆ ಅನ್ನಿಸಿ ಬಿಕ್ಕಿದ್ದಳು. ಗಂಭೀರೆಯಾಗಿ ಬಿಟ್ಟಳು. ಯಾಕೋ ಪಾರ್ಟಿ, ತಿರುಗಾಟ ಏನೂ ಬೇಡವೆನ್ನಿಸಿ ಕೆಲಸ ಮುಗಿಸಿ ಫ್ಲಾಟಿಗೆ ಬಂದು ಸೇರುತ್ತಿದ್ದಳು. ಯಾರ ಜೊತೆಯೂ ಬೇಡ, ಒಂಟಿಯಾಗಿಯೇ ಇರುವ ಹಟ ಮೂಡಿತ್ತು.

3-4 ತಿಂಗಳು ಕಳೆದಿರಬಹುದು. ಅಕ್ಕಪಕ್ಕದ ಫ್ಲಾಟಿನ ಕೆಲವರನ್ನು ಮಾತಾಡಿಸಿದರೂ ತನ್ನ ಬಿಗುವಿನಲ್ಲೇ ಇದ್ದಳು. ಒಮ್ಮೆಲೇ ತೀವ್ರ ಜ್ವರ ಬಂದು ತಾನು ಅರೆ ನಿದ್ದೆ, ಅರೆ ಎಚ್ಚರದಲ್ಲಿ ಬಿದ್ದುಕೊಂಡಿದ್ದಳು. ಕಂಪೆನಿಗೆ ಫೋನ್ ಮಾಡಿ ವಿಷಯ ತಿಳಿಸಿ ರಜೆ ಹಾಕಿದಳು. ಧರಿತ್ರಿ, ಜ್ಯೋತ್ಸ್ನಾ... ಹಲವಾರು ಗೆಳತಿಯರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದಳು. ಒಬ್ಬರೂ ಬರಲಿಲ್ಲ. ಅಮ್ಮ ಫೋನೇ ಎತ್ತಲಿಲ್ಲ. ಪುನಃ ಪುನಃ ಮಾಡಿದಾಗ, 'ಪರೀಕ್ಷೆ ನಡೀತಾ ಇದೆ, ಬರಲಾಗಲ್ಲ ಆಸ್ಪತ್ರೆಗೆ ಅಡ್ಮಿಟ್ ಆಗು' ಎಂದಳು. ಏಳಲೂ ತ್ರಾಣವಿಲ್ಲ, ಇದ್ದ ಬ್ರೆಡ್, ಬಿಸ್ಕತ್ ಎಲ್ಲ ತಿಂದು ಖಾಲಿ. ತಿನ್ನಲೇನೂ ಇಲ್ಲದೆ ಕಂಗಾಲಾಗಿ ಗಳಗಳ ಅತ್ತಿದ್ದಳು. ತೂರಾಡುತ್ತ ನಡೆದು ಪಕ್ಕದ ಫ್ಲಾಟಿನ ಬಾಗಿಲು ಬಡಿದಿದ್ದಳು. ಆಗ ಒಳಬಂದು ಆಕೆಯನ್ನು ಮಲಗಿಸಿ ಡಾಕ್ಟರನ್ನು ಕರೆತಂದವನು ಪಕ್ಕದ ಫ್ಲಾಟಿನ ಅರವಿಂದ ಜೋಶಿ, ಟೈಫಾಯಿಡ್ ತಿಂಗಳುಗಟ್ಟಲೆ ಕಾಡಿತು. ಅರವಿಂದ ಗೆಳೆಯನಂತೆ ಎಲ್ಲ ಹೊಣೆ ಹೊತ್ತ. ಗಂಜಿ ಕಾಸಿದ, ವಿಧಿ ಇಲ್ಲದೆ ಹೆಣ್ಣುಮಕ್ಕಳು ಮಾಡಬೇಕಾದ ಕೆಲಸವನ್ನೂ ತಾನೇ ಮಾಡಿದ. ನಿಧಾನಕ್ಕೆ ಅವಳ ಎಲ್ಲ ಕಥೆ ತಿಳಿದು ಅವಳೊಡನೆ ಬದುಕುವ ನಿರ್ಧಾರ ಮಾಡಿದ. ತಾನು ಲಗ್ನ ನಿರಾಕರಿಸಿದಾಗ ಅದಕ್ಕೂ ಒಪ್ಪಿದ. ಬದುಕು ಚೆನ್ನಾಗಿತ್ತು. ಅರವಿಂದ ಒಳ್ಳೆಯವ. ಪ್ರೀತಿಯಿಂದ ನೋಡಿಕೊಂಡ. ಆತ ಪಾರ್ಟಿ, ಮೋಜು, ಮಜಾ ಮಾಡಲು ಇಚ್ಛಿಸಲಿಲ್ಲ. ಆದರೆ ತನಗ್ಯಾವ ಕಟ್ಟುನಿಟ್ಟು ಹಾಕಲಿಲ್ಲ. ಆದರೆ ಒಮ್ಮೆಲೇ ಹೌಹಾರುವ ಸ್ಥಿತಿ ತನ್ನದಾಯಿತು. ತಾನು ಲೆಕ್ಕ ತಪ್ಪಿ ಗರ್ಭಿಣಿ ಎಂದು ಗೊತ್ತಾದಾಗ ಕಂಗಾಲಾದಳು. ಗಾಬರಿಯಾಗಿ 'ಇದೆಲ್ಲ ಬೇಡ, ತೆಗೆಸಿಬಿಡ್ತೇನೆ' ಅಂದಳು. 'ಬೇಡ' ಅಂದ ಅರವಿಂದ. 'ಆ ಮಗುವನ್ನು ನನಗೆ ಕೊಡು ನಾನು ಸಾಕ್ತೇನೆ' ಎಂದು ಅಂಗಲಾಚಿದ, ಎಲ್ಲ ಜವಾಬ್ದಾರಿ ನನಗಿರಲಿ ಎಂದ.

ಆಗ ಬಂದವರು ಅವನ ತಾಯಿ ಗೋದಾವರಿ ಆಯಿ. ಆಯಿ ತಾಯಿಯ ಪ್ರೀತಿ ಕೊಟ್ಟಳು. ಹೆತ್ತ ಮಗಳಂತೆ ನೋಡಿಕೊಂಡಿದ್ದಳು. ಹುಟ್ಟಿದ್ದು ಅವಳಿ-ಜವಳಿ ದಿಶಾ, ನಿಶಾ. ಆಯಿ ಮಕ್ಕಳ, ಮನೆಯ ಜವಾಬ್ದಾರಿ ಹೊತ್ತರು. ಅರವಿಂದ ಪ್ರೀತಿಯ ಧಾರೆ ಹರಿಸಿದ.

ಪುನಃ ಕೆಲಸಕ್ಕೆ ಸೇರಿದಾಗ ಯಾರೂ ಬೇಡವೆನ್ನಲಿಲ್ಲ.

ಅರವಿಂದನದ್ದೂ ನೋವಿನ ಕಥೆ, ಆತ ಮರಾಠೀ ಬ್ರಾಹ್ಮಣ. ಪುಣೆಯ ಹತ್ತಿರದ ಹಳ್ಳಿಯೊಂದರಲ್ಲಿ ಆತನ ತಂದೆ ನಾರಾಯಣ ಜೋಶಿ ಪುರೋಹಿತರು, ಆಸ್ತಿವಂತರು. ಅವರ ಜೀವದ ಗೆಳೆಯ ಪಾಂಡುರಂಗ ದೇಶಪಾಂಡೆ, ನಿನ್ನ ಮಗ ನನ್ನ ಮಗಳು ಲಗ್ನವಾಗಲಿ ಎಂದು ಮಕ್ಕಳು ಚಿಕ್ಕವರಿದ್ದಾಗಲೇ ತೀರ್ಮಾನಿಸಿದ್ದರಂತೆ. ಅರವಿಂದ ಇಂಗ್ಲಿಷ್ ಎಂ.ಎ. ಮುಗಿಸಿ ಧಾರವಾಡದ ಖಾಸಗಿ ಕಾಲೇಜೊಂದರಲ್ಲಿ ಕೆಲಸಕ್ಕೆ ಸೇರಿದ ಮೇಲೆ ಲಗ್ನದ ಮಾತೆತ್ತಿದರಂತೆ. ಬಿ.ಕಾಂ. ಮುಗಿಸಿದ ಮಗಳು ಗೀತಾಳನ್ನು ಲಗ್ನ ಮಾಡಿಕೊಟ್ಟರಂತೆ. ಧಾರವಾಡದಲ್ಲಿ ಹೊಸ ಸಂಸಾರ ಹೂಡಿಯಾಯಿತು. ಗೀತಾ ಮಂಕಾಗಿದ್ದಳಂತೆ. ಹತ್ತಿರ ಬಂದರೆ ಸಿಡುಕುತ್ತಿದ್ದಳಂತೆ, ಸ್ವಲ್ಪ ದಿನ ಸರಿಹೋದೀತು ಎಂದು ಅರವಿಂದ ತಾಳ್ಮೆಯಿಂದ ಇದ್ದು ಪತ್ನಿಯ ಮೇಲೆ ಪ್ರೀತಿ ತೋರಿಸಿದನಂತೆ. ಒಡವೆ,